# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ (2015 ಮಾರ್ಚ್ ಪರೀಕ್ಷೆಯಿಂದ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಸಿಸಿಇ) ಪದ್ಧತಿಯನ್ನು ಅಳವಡಿಸುವ ಬಗ್ಗೆ. |
| ಓದಲಾಗಿದೆ | 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪ್ರಸ್ತಾವನೆ ಸಂಖ್ಯೆ: ಸಿ.ಎನ್‌ಸಿಎಫ್.2005 (ಸಿಸಿಇ)/2011-12 ದಿನಾಂಕ 19.06.2014 |

ಪ್ರಸ್ತಾವನೆ:

1. ಮೇಲೆ ಓದಲಾದ ಮೇಲೆ (1) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ 6 ರಿಂದ 9ನೇ ತರಗತಿವರೆಗೆ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ (ಸಿ.ಸಿ.ಇ)ಯನ್ನು ಅಳವಡಿಸಿಕೊಂಡು ಅದರಂತೆ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ.
2. 2014ರ ಜೂನ್ ಅಂತ್ಯದವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಕೇವಲ ಬೌದ್ಧಿಕ ಕ್ಷೇತ್ರಕ್ಕೆ ಮಾತ್ರ ಮೀಸಲಿಟ್ಟು ಬಹುತೇಕವಾಗಿ ಅವರ ನೆನಪಿನ ಶಕ್ತಿಯನ್ನು ಪರೀಕ್ಷಿಸಲಾಗುತ್ತಿತ್ತು. ಬದಲಾಗುತ್ತಿರುವ ಶೈಕ್ಷಣಿಕ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯನ್ನು ನಿರೀಕ್ಷಿಸಬೇಕಾದಲ್ಲಿ ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ಮನೋಜನ್ಯವಲಯಗಳನ್ನು ಪರಿಗಣಿಸಬೇಕಾಗುತ್ತದೆ.
3. ಈ ಹಿನ್ನೆಲೆಯಲ್ಲಿ 2014-15ನೇ ಸಾಲಿನಿಂದ 10ನೇ ತರಗತಿಯಲ್ಲಿ ಸಿಸಿಇ ಅಳವಡಿಕೆ ಆಗಬೇಕಾಗಿರುವುದರಿಂದ ಹಾಗೂ ಪ್ರಸ್ತುತ ಇರುವ ಪರೀಕ್ಷಾ ಪದ್ದತಿಯನ್ನು ಮಾರ್ಪಡಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿಯನ್ನು(ಸಿ.ಸಿ.ಇ) ಅಳವಡಿಸುವ ಕುರಿತು ಪರಿಶೀಲಿಸಲು ಉಪ ಸಮಿತಿಯನ್ನು ರಚಿಸಿರುವುದಾಗಿ ತಿಳಿಸಿರುತ್ತಾರೆ.
4. ಸದರಿ ಉಪಸಮಿತಿಯು ಜಿಲ್ಲಾ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಶಿಕ್ಷಕರಿಂದ, ಮುಖ್ಯ ಶಿಕ್ಷಕರಿಂದ, ವಿಷಯ ಪರಿವೀಕ್ಷಕರಿಂದ, ಕ್ಷೇತ್ರ ಶಿಕ್ಷಣಾದಿಕಾರಿಗಳಿಂದ, ನೋಡಲ್ ಅಧಿಕಾರಿಗಳಿಂದ, ಉಪನಿರ್ದೇಶಕರಿಂದ, ಸಿಟಿಇ ಪ್ರಾಂಶುಪಾಲರಿಂದ, ಅಭಿಪ್ರಾಯಗಳನ್ನು ಸಂಗ್ರಹಿಸಿರುತ್ತದೆ.
5. ವಿದ್ಯಾರ್ಥಿಗಳನ್ನು ಪ್ರಗತಿಶೀಲರನ್ನಾಗಿಸಲು, ಸರ್ವತೋಮುಖ ಅಭಿವೃದ್ಧಿಗೆ ಪ್ರೇರಿಪಿಸಲು ಶಿಕ್ಷಣ ಮಹತ್ತರವಾದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಕಲಿಕೆ ಉಂಟಾಗಬೇಕಾದಲ್ಲಿ ಅವರಲ್ಲಿ ಶಿಸ್ತು, ಕಾರ್ಯತತ್ಪರತೆ, ಸೃಜನಶೀಲತೆ, ಕಲಾತ್ಮತೆಗಳಿಗೆ ಶಿಕ್ಷಣ ಒತ್ತು ನೀಡಬೇಕಾಗಿದೆ. ಇದನ್ನು ಸಾಧಿಸಲು ಪಠ್ಯ ವಿಷಯಗಳ ಮೌಲ್ಯಮಾಪನದ ಜೊತೆಗೆ ಸಹ ಪಠ್ಯ ಚಟುವಟಿಕೆಗಳ ಮೌಲ್ಯಮಾಪನದ ಅಗತ್ಯತೆ ಇರುವುದನ್ನು ವರದಿಯಲ್ಲಿ ತಿಳಿಸಿರುವುದನ್ನು ಗಮನಿಸಿದೆ.
6. ಉಪಸಮಿತಿಯ ವರದಿಯ ಆಧಾರದ ಮೇರೆಗೆ 2014-15ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸೇರಿ ಮುಂದಿನ ದಿನಗಳಲ್ಲಿ ಅಂದರೆ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ (2015 ಮಾರ್ಚ್ ಪರೀಕ್ಷೆಯಿಂದ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ (ಸಿ.ಸಿ.ಇ)ಯನ್ನು ಅಳವಡಿಸಿಕೊಳ್ಳಲು ಸರ್ಕಾರದ ಅನುಮತಿ ಕೋರಿರುತ್ತಾರೆ.

26/06/2014

7. ಈ ಹಿನ್ನಲೆಯಲ್ಲಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 156 ಮಾಹಿತಿ 2014, ಬೆಂಗಳೂರು ದಿನಾಂಕ 26.06.2014**

8. 2014–15ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸೇರಿ ಮುಂದಿನ ದಿನಗಳಲ್ಲಿ ಅಂದರೆ 2014–15ನೇ ಸಾಲಿನಿಂದ ಜಾರಿಗೆ ಬರುವಂತೆ (2015 ಮಾರ್ಚ್ ಪರೀಕ್ಷೆಯಿಂದ) ಈ ಕೆಳಕಂಡ ಮಾನದಂಡಗಳನ್ನು ಆಧರಿಸಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ (ಸಿ.ಸಿ.ಇ)ಯನ್ನು ಅಳವಡಿಸಿ ಮಾರ್ಚ್ 2015ರಲ್ಲಿ ಹಾಗೂ ತದನಂತರದಲ್ಲಿ ನಡೆಸುವ ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು (ಮುಂಬರುವ ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶಗಳನ್ನು) ಅಂಕಗಳು ಹಾಗೂ ಶ್ರೇಣಿಗಳ ಆಧಾರದ ಮೇರೆಗೆ ಪ್ರಕಟಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

**ಮಾನದಂಡಗಳು:**

1. ಹತ್ತು ವರ್ಷದ ಔಪಚಾರಿಕ ಶಿಕ್ಷಣವನ್ನು ಮುಗಿಸಿದ ಎಲ್ಲಾ ವಿದ್ಯಾರ್ಥಿಗಳೂ, ಹತ್ತನೆ ವರ್ಷದ ಅಂತ್ಯದಲ್ಲಿ ಎಸ್.ಎಸ್.ಎಲ್.ಸಿ ಅಂತಿಮ ಪರೀಕ್ಷೆ ಬರೆಯತಕ್ಕದ್ದು.
2. ವಿದ್ಯಾರ್ಥಿಯ ಮೌಲ್ಯಮಾಪನ ಆಂತರಿಕ ಹಾಗೂ ಬಾಹ್ಯ ಪರೀಕ್ಷಾ ವಿಧಾನದಿಂದ ಕೂಡಿರಬೇಕು.
3. ಬಾಹ್ಯ ಪರೀಕ್ಷೆಗೆ ಶೇಕಡಾ 80 ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಶೇಕಡಾ 20 ಅಂಕಗಳನ್ನು ಮೀಸಲಿರಿಸತಕ್ಕದ್ದು.
4. ಎಲ್ಲ ವಿಷಯಗಳಲ್ಲಿ ಬಾಹ್ಯ ಪರೀಕ್ಷೆಗೆ ಒಟ್ಟು 500 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನಕ್ಕೆ 125 ಅಂಕಗಳನ್ನು ನಿಗಧಿಪಡಿಸಿದೆ. ವಿಷಯವಾರು ಅಂಕಗಳ ವಿಂಗಡಣೆ (ಗರಿಷ್ಠ) ಇಂತಿದೆ.

| ವಿಷಯ | ಬಾಹ್ಯ | ಆಂತರಿಕ | ಒಟ್ಟು |
|---|---|---|---|
| ಪ್ರಥಮ ಭಾಷೆ | 100 | 25 | 125 |
| ದ್ವಿತೀಯ ಭಾಷೆ | 80 | 20 | 100 |
| ತೃತೀಯ ಭಾಷೆ | 80 | 20 | 100 |
| ಗಣಿತ | 80 | 20 | 100 |
| ವಿಜ್ಞಾನ | 80 | 20 | 100 |
| ಸಮಾಜ ವಿಜ್ಞಾನ | 80 | 20 | 100 |
| ಒಟ್ಟು | 500 | 125 | 625 |

5. ವಿದ್ಯಾರ್ಥಿಗಳ ಪ್ರಗತಿಯನ್ನು ಭಾಗ 'ಎ' (ಪಠ್ಯ ವಿಷಯಗಳು), ಭಾಗ 'ಬಿ' (ಸಹ ಪಠ್ಯ ವಿಷಯಗಳು) ಆಧಾರದ ಮೇಲೆ ಪರಿಗಣಿಸತಕ್ಕದ್ದು.
6. ಭಾಗ 'ಎ' ಯಲ್ಲಿ ಬರುವ ಪ್ರತಿವಿಷಯಗಳಿಗೆ ಅಂಕಗಳು ಹಾಗೂ ಶ್ರೇಣಿಗಳನ್ನು ನೀಡಿ ಒಟ್ಟಾರೆ ಅಂಕಗಳು ಮತ್ತು ಶ್ರೇಣಿ (Cumulative Grade Point Average CGPA)ಯನ್ನು ನೀಡತಕ್ಕದ್ದು.

26/06/2014

7. ಭಾಗ 'ಬಿ' ಯಲ್ಲಿ (i) ದೈಹಿಕ ಹಾಗೂ ಆರೋಗ್ಯ ಶಿಕ್ಷಣ (ii) ಕಾರ್ಯಾನುಭವ, (iii) ಮನೋಭಾವನೆ ಮತ್ತು ಮೌಲ್ಯಗಳು (iv) ಕಲಾ ಶಿಕ್ಷಣದ ಸಹಪಠ್ಯ ವಿಷಯಗಳಿಗೆ ಎ. ಬಿ ಅಥವಾ ಸಿ ಶ್ರೇಣಿಗಳನ್ನು ನೀಡತಕ್ಕದ್ದು. ಒಟ್ಟಾರೆ ಶ್ರೇಣಿ (CGPA)ಯನ್ನು ನೀಡತಕ್ಕದ್ದಲ್ಲ.

9. ಅಂಕಗಳು ಮತ್ತು ಶ್ರೇಣಿಗಳ ವಿವರ ಇಂತಿದೆ.

ಒಟ್ಟು 625 ಅಂಕಗಳಿಗೆ

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 562 – 625 | 90 – 100 | A+ |
| 500 – 561 | 80 – 89 | A |
| 437 – 499 | 70 – 79 | B+ |
| 375 – 436 | 60 – 69 | B |
| 312 – 374 | 50 – 59 | C+ |
| 219 – 311 | 30 – 49 | C |

ಒಟ್ಟು 100 ಅಂಕಗಳಿಗೆ

| ಅಂಕಗಳು / ಶೇಕಡ | ಶ್ರೇಣಿ |
|---|---|
| 90 – 100 | A+ |
| 80 – 89 | A |
| 70 – 79 | B+ |
| 60 – 69 | B |
| 50 – 59 | C+ |
| 30 – 49 | C |

ಒಟ್ಟು 125 ಅಂಕಗಳಿಗೆ

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 112 – 125 | 90 – 100 | A+ |
| 100 – 111 | 80 – 89 | A |
| 87 – 99 | 70 – 79 | B+ |
| 75 – 86 | 60 – 69 | B |
| 62 – 74 | 50 – 59 | C+ |
| 38 – 61 | 30 – 49 | C |

ಶ್ರೀ
26/06/2014

ಭಾಗ – ಬಿ

| ಸಹಪಠ್ಯ ವಿಷಯಗಳು | ಶ್ರೇಣಿ |
|---|---|
| ದೈಹಿಕ ಮತ್ತು ಆರೋಗ್ಯ ಶಿಕ್ಷಣ<br>Physical and Health Education | |
| ಮನೋಭಾವನೆ ಮತ್ತು ಮೌಲ್ಯಗಳು<br>Attitude and Values | |
| ಕಾರ್ಯಾನುಭವ<br>Work Experience | |
| ಕಲಾ ಶಿಕ್ಷಣ<br>Art Education | |

10. ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆಯಲ್ಲಿ 100 ಅಂಕಗಳಿಗೆ ಕನಿಷ್ಠ 30 ಹಾಗೂ ಇತರೆ ವಿಷಯಗಳಲ್ಲಿ 80 ಅಂಕಗಳಿಗೆ ಕನಿಷ್ಠ 24 ಅಂಕಗಳನ್ನು ಪಡೆದಿರತಕ್ಕದ್ದು.
11. ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯ 500 ಅಂಕಗಳಿಗೆ ಕನಿಷ್ಠ 175 ಅಂಕಗಳನ್ನು (ಶೇಕಡಾ 35) ಪಡೆದಿರಲೇಬೇಕು.

**ರೂಪಣಾತ್ಮಕ ಮೌಲ್ಯಮಾಪನ (Formative Assessment) ದ ಚಟುವಟಿಕೆಗಳು:**

12. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ನಾಲ್ಕು ರೂಪಣಾತ್ಮಕ ಮೌಲ್ಯ ಮಾಪನದ ಆಧಾರದ ಮೇಲೆ ನಿರ್ಧರಿಸುವುದು. $FA_1$, $FA_2$, $FA_3$, $FA_4$.
13. ಪ್ರತಿಯೊಂದು ರೂಪಣಾತ್ಮಕ ಮೌಲ್ಯಮಾಪನದಲ್ಲಿ 20 ಅಂಕಗಳ ಕಿರುಪರೀಕ್ಷೆ, (ಉಪಾಧ್ಯಾಯರ ನಿರ್ಧಾರದಂತೆ) ಹಾಗೂ 15 ಅಂಕಗಳ ಎರಡು ಚಟುವಟಿಕೆಗಳು ಇದ್ದು, ಪ್ರತಿ ರೂಪಣಾತ್ಮಕ ಮೌಲ್ಯ ಮಾಪನಕ್ಕೆ 50 ಅಂಕಗಳು ನಿಗದಿಯಾಗಿರುತ್ತದೆ. ಒಟ್ಟು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಅಂಕ 200 ಆಗಿರುತ್ತದೆ. ವಿದ್ಯಾರ್ಥಿಯು ಗಳಿಸಿದ ಒಟ್ಟು ಅಂಕಗಳನ್ನು 200 ಅಂಕಗಳಿಗೆ ಪರಿಮಾಣಾತ್ಮಕವಾಗಿ (Proportionate) ಪ್ರಥಮ ಭಾಷೆಗೆ 25 ಅಂಕಗಳಿಗೂ, ಉಳಿದ ವಿಷಯಗಳಲ್ಲಿ 20 ಅಂಕಗಳಿಗೂ ಲೆಕ್ಕ ಹಾಕಿ ಆಂತರಿಕ ಮೌಲ್ಯ ಮಾಪನಕ್ಕೆ ಪರಿಗಣಿಸತಕ್ಕದ್ದು.
14. ಭಾಷಾ ವಿಷಯಗಳು ಹಾಗೂ ಕೋರ್‌ವಿಷಯಗಳಲ್ಲಿ ಪೂರಕ ಚಟುವಟಿಕೆಗಳ ಪಟ್ಟಿಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಿಗಧಿಪಡಿಸುತ್ತಿದೆ. ಆ ಮಾದರಿಯಲ್ಲಿ ಸ್ಥಳೀಯವಾಗಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಯಾವುದೇ ಚಟುವಟಿಕೆಗಳನ್ನು ಉಪಾಧ್ಯಾಯರು ಅಳವಡಿಸಿಕೊಳ್ಳಲು ಅವಕಾಶ ನೀಡಲಾಗಿದೆ.
15. ಆಂತರಿಕ ಮೌಲ್ಯ ಮಾಪನಕ್ಕೆ ಬಳಸಬಹುದಾದ ಕಿರುಪರೀಕ್ಷೆ ಹಾಗೂ ಚಟುವಟಿಕೆಗಳು ಸಿ.ಸಿ.ಇ. ಆಧಾರವಾಗಿರಬೇಕು.
16. ಆಂತರಿಕ ಅಂಕಗಳನ್ನು ನಿರ್ಧರಿಸುವಾಗ ದಶಮಾಂಶಗಳನ್ನು ನಿಯಮಾನುಸಾರ ಹತ್ತಿರದ ಪೂರ್ಣಾಂಕಕ್ಕೆ ಪರಿಗಣಿಸುವುದು.
17. ವಿದ್ಯಾರ್ಥಿಗಳು ತೇರ್ಗಡೆಯಾಗಲು ಆಂತರಿಕ ಮೌಲ್ಯ ಮಾಪನದಲ್ಲಿ ಇಂತಿಷ್ಟೇ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.
18. ವಿದ್ಯಾರ್ಥಿಗಳ ತೇರ್ಗಡೆಗೆ ಅಂತಿಮ ಫಲಿತಾಂಶವನ್ನು ನಿರ್ಧರಿಸುವಾಗ (ಪರೀಕ್ಷಾ ಮಂಡಳಿ ನಡೆಸುವ) ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲೂ ಕನಿಷ್ಠ ಶೇಕಡಾ 30 ರಷ್ಟು ಅಂಕಗಳನ್ನು ಒಟ್ಟಾರೆ ಶೇಕಡಾ 35 ಅಂಕಗಳನ್ನು ಪಡೆದಿರತಕ್ಕದ್ದು.

26/06/2014

19. ಖಾಸಗಿ ಅಭ್ಯರ್ಥಿಗಳಿಗೆ (For Private Candidates)

- ಭಾಗ 'ಎ' ಯ ಪಠ್ಯ ವಿಷಯಗಳಿಗಷ್ಟೇ ಅಂತಿಮ ಪರೀಕ್ಷೆಯನ್ನು ನಡೆಸತಕ್ಕದ್ದು.

ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ವಿವರ

| | |
|---|---|
| ಪ್ರಥಮ ಭಾಷೆ | 125 |
| ದ್ವಿತೀಯ ಭಾಷೆ | 100 |
| ತೃತೀಯ ಭಾಷೆ | 100 |
| ಗಣಿತ | 100 |
| ವಿಜ್ಞಾನ | 100 |
| ಸಮಾಜ ವಿಜ್ಞಾನ | 100 |
| **ಒಟ್ಟು** | **625 ಅಂಕಗಳು.** |

- ಆಂತರಿಕ ಮೌಲ್ಯಮಾಪನ ಹಾಗೂ ಭಾಗ 'ಬಿ'ಯ ಪರೀಕ್ಷೆಗಳಿರುವುದಿಲ್ಲ.
- ಭಾಗ 'ಎ' ಯ ಪರೀಕ್ಷೆಯನ್ನು 625 ಅಂಕಗಳಿಗೆ ನಡೆಸುವುದು

**20. ಇತರೆ ವಿಷಯಗಳು**

1. ಅರ್ಧವಾರ್ಷಿಕ ಪರೀಕ್ಷೆಯ ಅಂಕಗಳನ್ನು ರೂಪಣಾತ್ಮಕ ಮೌಲ್ಯಮಾಪನದೊಡನೆ ಸೇರಿಸುವ ಅವಶ್ಯಕತೆ ಇಲ್ಲ.
2. ಪೂರ್ವ ಸಿದ್ಧತಾ ಪರೀಕ್ಷೆಗಳನ್ನು 'ಎರಡಕ್ಕೆ' ಮಿತಿಗೊಳಿಸತಕ್ಕದ್ದು.
3. ಪಾಠ ಪ್ರವಚನಗಳು, ಚಟುವಟಿಕೆಗಳು, ಫೆಬ್ರವರಿಯ ಅಂತ್ಯದವರೆಗೂ ಶಾಲೆಯಲ್ಲಿ ನಿಗದಿತ ವೇಳಾ ಪಟ್ಟಿಯಂತೆ ನಡೆಸತಕ್ಕದ್ದು.
4. 2014ರ ಅಥವಾ ಅದಕ್ಕೂ ಮೊದಲಿನ ಸಾಲುಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಚಲಿತದಲ್ಲಿನ ನಿಯಮಾನುಸಾರ ಹಳೇ ಪಠ್ಯಕ್ರಮದಲ್ಲಿ 4 ಬಾರಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ನೀಡುವುದು.

**21. ವಿಶೇಷ ಅಭ್ಯರ್ಥಿಗಳಿಗೆ:**

ಭಾಷಾ ವಿನಾಯಿತಿ, ಹೆಚ್ಚುವರಿ ಸಮಯ, ಸಹಾಯಕರ ಸೌಲಭ್ಯ, ಪರ್ಯಾಯ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ವಿನಾಯಿತಿ ಪಡೆದ ವಿಷಯಗಳಿಗೆ ಶಾಲಾ ಹಂತದ ಮೌಲ್ಯಮಾಪನದಿಂದ ವಿನಾಯಿತಿ ನೀಡಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಿದ ವಿಷಯಗಳಿಗನುಗುಣವಾಗಿ ನೀಡುವುದು.

22. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ನಿರ್ವಹಣಾ ವ್ಯವಸ್ಥೆಯ ತಂತ್ರಾಂಶವನ್ನು ಮರುವಿನ್ಯಾಸವನ್ನು ಸಿಸಿಇ ಆಧಾರದ ಮೇರೆಗೆ ಮಾರ್ಪಾಡಿಸಲು ಸೂಚಿಸಿದೆ.

23. ಈ ವ್ಯವಸ್ಥೆಯ ಕುರಿತು ರಾಜ್ಯದ ಎಲ್ಲಾ ಶಿಕ್ಷಕರಿಗೆ, ಪೋಷಕರಿಗೆ ವ್ಯಾಪಕವಾದ ಮಾಹಿತಿಯನ್ನು ವೆಬ್ ಸೈಟ್, ಪತ್ರಿಕೆಗಳ ಮೂಲಕ ಪ್ರಕಟಿಸುವುದು.

26/06/2014

24. ಶಿಕ್ಷಕರಿಗೆ ತರಬೇತಿ ನೀಡಲು ರಾಜ್ಯ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ತರಬೇತಿಗೊಳಿಸಿ ಅವರ ಮೂಲಕ ರಾಜ್ಯಾದ್ಯಂತ ಎಲ್ಲಾ ಶಿಕ್ಷಕರಿಗೆ ತರಬೇತಿಯನ್ನು ಟೆಲಿಕಾನ್ಫರೆನ್ಸ್, ಮುಖಾಮುಖಿ ಕಾರ್ಯಾಗಾರಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ & ಇ-ಆಡಳಿತ)
26/06/2014

ಪ್ರತಿ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಗೆಜೆಟ್, ಬೆಂಗಳೂರು ಇವರಿಗೆ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿ, 500 ಪ್ರತಿಗಳನ್ನು ಸರ್ಕಾರಕ್ಕೆ ಒದಗಿಸಲು ಕೋರಿದೆ.
2. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾದ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
5. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
7. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
8. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಸಂಘ, ಬೆಂಗಳೂರು
10. ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
11. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ಸಮನ್ವಯಾಧಿಕಾರಿಗಳು(ಎಸ್‌ಎಸ್‌ಎ & ಆರ್‌ಎಂಎಸ್‌ಎ), ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು, ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ನಿರ್ದೇಶಕರು, ಕ.ಪ್ರೌ.ಶಿ.ಪ.ಮಂ ಮೂಲಕ ನೀಡಲು ತಿಳಿಸಿದೆ.
12. ಜಂಟಿ ನಿರ್ದೇಶಕರುಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗ ಹಾಗೂ ಜಂಟಿ ನಿರ್ದೇಶಕರು (ಆಡಳಿತ ಮತ್ತು ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
13. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
15. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು